೩. ರಾಜ್ಯದಲ್ಲಿ ಗಂಡು ಮಕ್ಕಳ ರೀತಿ ಹೆಣ್ಣು ಮಕ್ಕಳಿಗೂ ಪಾಲುದಾರಿಕೆ ಹಕ್ಕು ಕೊಡುವ ಬಗ್ಗೆ.

ಶ್ರೀ ಎಂ. ವಿ. ವೆಂಕಟಪ್ಪ.—ಅಧ್ಯಕ್ಷರೇ, ಗಂಡು ಮಕ್ಕಳಿಗೆ ಪಾಲುದಾರಿಕೆ ಏನಿದೆ ಅದೇ ರೀತಿ ಹೆಣ್ಣುಮಕ್ಕಳಿಗೆ ಪಾಲುದಾರಿಕೆ ಹಕ್ಕು ಕೊಡಲು ಪಕ್ಕದ ಆಂಧ್ರದಲ್ಲಿ ಕಾನೂನು ಜಾರಿಗೆ ಬಂದಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ತರುವುದಕ್ಕೆ ಏನಾದರೂ ಯೋಚನೆ ಇದೆಯೇ? ಇದ್ದರೆ ಯಾವಾಗ ತರುತ್ತಾರೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಮ್ಮ ವಿಚಾರ ನಡೆದಿದ್ದು ಅದು ಕೊನೇ ಹಂತದಲ್ಲಿದೆ. ಮುಂದೆ ತಿಳಿಸುತ್ತೇವೆ.

೪ ಕೆ.ಜಿ.ಎಫ್. ಜಿಲ್ಲಾ ಪೋಲೀಸ್ ಡಿ.ವೈ.ಎಸ್.ಪಿ. ನಂಜುಂಡಪ್ಪ ಇವರು ಮೇಲಿನ ಅಧಿಕಾರಿಗಳ ಆದೇಶವನ್ನು ದಿಕ್ಕರಿಸಿರುವ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕೆಜಿಎಫ್ ಜಿಲ್ಲಾ ಪೋಲೀಸ್ ಡಿವೈಎಸ್‌ಪಿ ನಂಜುಂಡಪ್ಪ ಇವರು ಎಸ್‌ಪಿಯವರು ರಜೆಯನ್ನು ಮಂಜೂರು ಮಾಡಲು ನಿರಾಕರಿಸಿದ್ದರೂ ಸಹ ಅವರ ಆದೇಶವನ್ನು ದಿಕ್ಕರಿಸಿ ಮಾರ್ಚ್ ೮ರಂದು ರಜೆಯ ಮೇಲೆ ಹೋಗಿದ್ದರು. ಈ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ವಲಯದ ಡಿಐಜಿ ಶ್ರೀ ಎಂ. ಡಿ. ಸಿಂಗ್‌ರವರನ್ನು ನೇಮಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ಡಿಐಜಿ ಎಂ. ಡಿ. ಸಿಂಗ್‌ರವರು ತಮ್ಮ ವರದಿಯನ್ನು ಆದೇ ತಿಂಗಳಿನಲ್ಲೇ ಸರ್ಕಾರಕ್ಕೆ ಸಲ್ಲಿಸಿದರು. ಈ ವರದಿಯ ಮೇಲೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ. ಹಿರಿಯ ಅಧಿಕಾರಿಗಳ ಆದೇಶವನ್ನು ನಿರ್ಲಕ್ಷಿಸಿದ ಈ ಡಿವೈಎಸ್‌ಪಿಯ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ಎಂಬ ಬಗ್ಗೆ ಸದನಕ್ಕೆ ವಿವರವಾದ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈ ವಿಷಯದ ಬಗ್ಗೆ ನನಗೆ ವರದಿ ಬಂದಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಸಧ್ಯದಲ್ಲೇ ಇದರ ಬಗ್ಗೆ ನಿರ್ಣಯ ತೆಗೆದು ಕೊಳ್ಳುತ್ತೇನೆ.

೫. ಬೈಲಹೊಂಗಲ ನಗರದ ನೀರಿನ ಬವಣೆಯನ್ನು ನಿವಾರಿಸಲು 20 ಕೊಳವೆ ಬಾವಿಗಳನ್ನು ತೋಡಲು ಒತ್ತಾಯ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರ ಜನಸಂಖ್ಯೆಯು ಈಗ ೪೫೦೦೦ ದಷ್ಟಾಗಿದ್ದು ಇಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಆಗಿರುತ್ತದೆ. ಊರ ಹೊರಗಿನ ಜನರಿಗೆ ಮೂರು ನಾಲ್ಕು ದಿನಗಳಿಗೊಮ್ಮೆ ಪುರಸಭೆಯವರು ನೀರು ಬಿಡುತ್ತಿರುವ ಕಾರಣ ಜವರಿಗೆ ತೊಂದರೆ ಆಗಿದೆ. ಈ ನೀರಿನ ತೊಂದರೆಯನ್ನು ಹೋಗಲಾಡಿಸಲು ಕೂಡಲೇ ೨೦ ಕೊಳವೆ ಬಾವಿಗಳನ್ನು ತೋಡಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಲಿ ಬೆಂಗಳೂರು, ಇವರಿಗೆ ಆದೇಶ ನೀಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಪೂರ್ಣ ಉತ್ತರ ತಯಾರಿಲ್ಲ. ತರಿಸಿ ನಾಳೆ ನಾಡಿದ್ದು ಕೊಡುತ್ತೇನೆ.

೬ ಮಂಡಲ ಪಂಚಾಯಿತಿಯ ನೌಕರರನ್ನು ಸ್ಥಳೀಯ ಸಂಸ್ಥೆಗಳ ನೌಕರರಂತೆ ಪರಿಗಣಿಸಿ ಸೌಲಭ್ಯಗಳನ್ನು ನೀಡಲಿಲ ಒತ್ತಾಯ.

ಶ್ರೀ ಪಿ. ಸಿ. ಸಿದ್ದನಗೌಡ.—ಅಧ್ಯಕ್ಷರೇ ರಾಜ್ಯಾದ್ಯಂತ ಮಂಡಲಪಂಚಾಯತ್ ವ್ಯಾಪ್ತಿಯಲ್ಲಿ ಅನೇಕ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು ಸದರಿ ನೌಕರರನ್ನು ಖಾಯಂ ಸರ್ಕಾರಿ ನೌಕರರೆಂದು ಪರಿಗಣಿಸಬೇಕಾಗಿಯೂ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ನಗರಸಭಾ ನೌಕರರ ಸೇವಾ ನಿಯಮದ ಪ್ರಕಾರ ಖಾಯಂಗೊಳಿಸಿ ಇವರಿಗೆ ಸಲ್ಲಿಸಬೇಕಾದ ಗ್ರಾಚ್ಯುಯಿಟಿ ತುಟ್ಟಿಭತ್ಯ ಹಾಗೂ ಸಿಗಬೇಕಾದ ಸೌಲಭ್ಯಗಳನ್ನು ಕೊಡಬೇಕಾಗಿಯೂ ಹಾಗೂ ಇವರು ೧೯-೩-೯೨ರಂದು ಬೆಂಗಳೂರು ವಿಧಾನಸೌಧದ ಎದುರು ಧರಣಿ ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ? ಹೇಗೆ? ಬಂದಿದ್ದಲ್ಲಿ ಈ ನೌಕರರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಬಿ ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೇ,

ಮಂಡಲ ಪಂಚಾಯತ್ ನೌಕರರು ವಿಧಾನ ಸೌಧದ ಎದುರು ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಮಂಡಲ ಪಂಚಾಯಿತಿಗಳು ೧೯೮೭ರ ಏಪ್ರಿಲ್ ನಲ್ಲಿ ಅಸ್ತಿತ್ವಕ್ಕೆ ಬಂದಿವೆ. ಈ ಮಂಡಲ ಪಂಚಾಯಿತಿಗಳಲ್ಲಿ ಮೊದಲಿನ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳನ್ನು ಮುಂದುವರಿಸಲಾಗಿದೆ. ಮಂಡಲ ಪಂಚಾಯಿತಿಗಳು ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಗಳು ೧೯೫೩ರ ಕಾಯಿದೆಯನ್ವಯ ಅಂದರೆ ಕಾಯಿದೆ ಕಲಂ ೧೨೨ರಂತೆ' ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯಪಡಿಸಿದಂತೆ ಕಾರ್ಯದರ್ಶಿಗಳನ್ನು ಹೊರತು ಪಡಿಸಿ ಅದರ ಇತರ ನೇಮಕಾತಿಗಳು ಹಾಗೂ ಅವರಿಗೆ ಸಂದಾಯ ವಾಗತಕ್ಕ ವೇತನಗಳು ಹಾಗೂ ಭತ್ಯೆಗಳನ್ನು ನಮೂದಿಸಿ ನಿಯೋಜಿತರ ಒಂದು ಪಟ್ಟಿಯನ್ನು ನಿರ್ಧರಿಸತಕ್ಕದ್ದು. ಮತ್ತು ಜಿಲ್ಲಾ ಪರಿಷತ್ತಿಗೆ ಮಾಹಿತಿಗಾಗಿ ಅದನ್ನು ಒಪ್ಪಿಸತಕ್ಕದ್ದು'' ಎಂದು ನಮೂದಿಸಲಾಗಿದೆ. ಕಾರಣ ಮಂಡಲ ಪಂಚಾಯತಿ ಅಧೀನದಲ್ಲಿ ಬೇಕಾದ ಸಿಬ್ಬಂದಿ ನೇಮಕಾತಿ ಮತ್ತು ಅವರಿಗೆ ಸಂಬಳದ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುವ ಅಧಿಕಾರ ಮಂಡಲ ಪಂಚಾಯತಿಗೆ ಪಾತ್ರ ಪಹಿಸಿಕೊಡಲಾಗಿದೆ. ಮಂಡಲ ಪಂಚಾಯತಿ ನೌಕರರನ್ನು ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದಿಲ್ಲ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದು ಮತ್ತು ಬಡ್ತಿಯನ್ನು ನೀಡುವ ಬಗ್ಗೆ ಅವರ ಸಂಬಳವನ್ನು ಜಿಲ್ಲಾ ಪರಿಷತ್ತು ನಿಧಿಯಿಂದ ಹಾಗೂ ಸೇವಾ ಭದ್ರತೆಯನ್ನು ಒದಗಿಸುವಂತೆ ಕೇಳಿದ್ದು ಅವುಗಳು ಮಂಡಲ ಪಂಚಾಯಿತಿಯ ಆದಾಯದ ಮೇಲೆ ಅವಲಂಬಿತವಾಗಿದ್ದು ಮಂಡಲ ಪಂಚಾಯತಿಯವರೇ ನಿರ್ಧರಿಸ ಬಹುದಾಗಿದೆ. ಸದರಿ ನೇಮಕಗಳು ನೇಮಕಾತಿ ನಿಯಮಗಳ ಪ್ರಕಾರ ಈ ನೌಕರರನ್ನು ನೇಮಕ ಮಾಡಿಲ್ಲ ಸಂಚಿತ ಸಂಬಳಗಳ ಮೇಲೆ ನೇಮಕ ಮಾಡುವ ಜವಾಬ್ದಾರಿ ಮಂಡಳದ್ದು ಇರುತ್ತದೆ. ಇದರ ಬಗ್ಗೆ ಸರ್ಕಾರವು ಕೈಹಾಕುವ ಪ್ರಮೇಯವೆ ಇಲ್ಲ.

೭) ಜಿಲ್ಲಾ ಪರಿಷತ್ ಮಂಡಲ ಪಂಚಾಯತಿ ಮಸೂದೆಗೆ ತಿದ್ದುಪಡಿ ತಂದು ಅವುಗಳು ಸಮರ್ಪಕ ಸೇವೆಯನ್ನು ಸಲ್ಲಿಸಲು ಒತ್ತಾಯ

ಶ್ರೀ ಬಿ. ಆರ್. ಗುರುದೇವ್ (ಆಲೂರು).— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಮಸೂದೆಗಳಿಗೆ ತಿದ್ದುಪಡಿ ತಂದು ಸದರಿ ಸ್ಥಳೀಯ ಸಂಸ್ಥೆಗಳು ಸಮರ್ಪಕ ಸೇವೆ ಸಲ್ಲಿಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಕರ್ನಾಟಕ ಜಿಲ್ಲಾ ಪರಿಷತ್‌ಗಳ, ಮಂಡಲ ಪಂಚಾಯತ್‌ಗಳ, ತಾಲ್ಲೂಕ್ ಪಂಚಾಯತ್ ಸಮಿತಿಗಳ ಮತ್ತು ನ್ಯಾಯ ಪಂಚಾಯತ್ ಅಧಿನಿಯಮ ೧.೫೩ರ ಕಲಂ ೫(೩) ರನ್ವಯ ಹಿಂದುಳಿದ ವರ್ಗಗಳಿಗೆ ಸೇರಿದ ಯಾವೊಬ್ಬ ವ್ಯಕ್ತಿಯನ್ನು ಮಂಡಲ ಪಂಚಾಯತ್‌ಗೆ ಚುನಾಯಿಸದಿದ್ದಲ್ಲಿ ಜಿಲ್ಲಾ ಪರಿಷತ್ತು ನಾಮ ನಿರ್ದೇಶನ ಮಾಡತಕ್ಕದ್ದಾಗಿದೆ. ಹೀಗೆ ನಾಮಕರಣ ಮಾಡಲ್ಪಟ್ಟ ವ್ಯಕ್ತಿಯ ವಾರ್ಷಿಕ ಆದಾಯವು ರೂ. ೬,೪೦೦ಗಳಿಗೆ ಕಡಿಮೆ ಇರಬೇಕು. ಅವರು ಗ್ರಾಮೀಣ ಕುಶಲ ಕರ್ಮಿ ಅಥವಾ ಭೂರಹಿತ ಕೃಷಿ ಕಾರ್ಮಿಕರಾಗಿರಬೇಕು ಮತ್ತು ಅವರು ಜಿಲ್ಲೆಯ ಜನಸಂಖ್ಯೆಯ ಶೇ ೧೫ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ವರ್ಗಕ್ಕೆ ಸೇರಿರಬೇಕು.

ಕೆಲವೊಂದು ಜಿಲ್ಲಾ ಪರಿಷತ್‌ಗಳಲ್ಲಿ ಅಧ್ಯಕ್ಷರು ನಾಮ ನಿರ್ದೇಶನ ಮಾಡಿದ್ದು ಇದು ಕಾನೂನಿಗೆ ವಿರುದ್ಧವಾಗಿದ್ದರಿಂದ ಹಾಗೂ ಉಚ್ಚ ನ್ಯಾಯಾಲಯವು ಈ ಬಗ್ಗೆ ನೀಡಿದ ತೀರ್ಪಿನಂತೆ ಅಧ್ಯಕ್ಷರು ಮಾಡಿದ ನಾಮ ನಿರ್ದೇಶನವನ್ನು ರದ್ದು ಪಡಿಸಿ ಜಿಲ್ಲಾ ಪರಿಷತ್ತಿನಿಂದ ನಾಮ ನಿರ್ದೇಶನ ಮಾಡಲಾಂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಮಾನ್ಯ ಸದಸ್ಯರು ಸೂಚಿಸಿರುವ ತಿದ್ದುಪಡಿಯನ್ನು ಪರಿಗಣಿಸಲಾಗುವುದು.